(

# ಬೆಂಗಳೂರು ವಿಶ್ವವಿದ್ಯಾಲಯ

ಜ್ಞಾನಭಾರತಿ, ಬೆಂಗಳೂರು-560056

ಸಂಖ್ಯೆ: EST-1/E1/KCS/(CLT)Rulers 2012/2021

ದಿನಾಂಕ: 04.12.2022

## ಸುತ್ತೋಲೆ

**ವಿಷಯ:** ಬೆಂಗಳೂರು ವಿಶ್ವವಿದ್ಯಾಲಯದ ಬೋಧಕೇತರ ಸಿಬ್ಬಂದಿಗಳಿಗೆ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ತೆಗೆದುಕೊಳ್ಳುವ ಬಗ್ಗೆ.

**ಉಲ್ಲೇಖ:** 1. ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 13 ಎಸ್ ಸಿ ಆರ್ 2022 ದಿನಾಂಕ: 22.03.2022.
2. ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ, ಇವರ ಪತ್ರ ಸಂಖ್ಯೆ: ಕೆಎಸ್ಇಡಿಸಿ / ಸಾಉಇ/ ಕಂಸಾಪ / 2022-23 ದಿನಾಂಕ: 11.10.2022.
3. ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ: 25.11.2022.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ (1) ರ ಸರ್ಕಾರದ ಆದೇಶದಂತೆ, ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ಕಡ್ಡಾಯವಾಗಿ ದಿನಾಂಕ: 31.12.2022 ರ ಒಳಗೆ ತೆಗೆದುಕೊಂಡು ಉತ್ತೀರ್ಣರಾಗ ಬೇಕಾಗಿರುತ್ತದೆ. ಆದುದರಿಂದ, ವಿಶ್ವವಿದ್ಯಾಲಯದ ಎಲ್ಲಾ ಬೋಧಕೇತರ ಅಧಿಕಾರಿ / ಸಿಬ್ಬಂದಿಗಳು ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ಕಿಯಾನಿಕ್ಸ್ ಸಂಸ್ಥೆಯ ಅಧಿಕೃತ ಅಂತರ್ಜಾಲ ತಾಣವಾದ **https://nkclt/clt.karantaka.gov.in/** ರಲ್ಲಿ ನೋಂದಾಯಿಸಿಕೊಂಡು ಅದರ ಸದುಪಯೋಗವನ್ನು ಪಡೆದುಕೊಳ್ಳಲು ಸೂಚಿಸಲಾಗಿದೆ.

ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ತೆಗೆದು ಕೊಳ್ಳಲು ನೋಂದಾಯಿಸುವ ಹಾಗೂ ಸ್ಲಾಟ್ ಬುಕಿಂಗ್ ಮಾಡುವ ವಿಧಾನ ಈ ಕೆಳಗಿನಂತಿದೆ.

1. ವಿಶ್ವವಿದ್ಯಾಲಯದ ಅಧಿಕಾರಿಗಳು/ಸಿಬ್ಬಂದಿಗಳು ಸಾಕ್ಷರತಾ ಪರೀಕ್ಷೆಯನ್ನು ಜಾಲತಾಣ **https://nkclt/clt.karantaka.gov.in/** ರಲ್ಲಿ **"ಆನ್ ಲೈನ್ ಮುಖಾಂತರ ರಿಜಿಸ್ಟ್ರೇಶನ್"** ಮಾಡಿಕೊಳ್ಳಲು ತಮ್ಮ **ಬಾವಚಿತ್ರ (30 ರಿಂದ 50 kb), ಅಭ್ಯರ್ಥಿಯ ಸಹಿ (20 kb), ವಿಶ್ವವಿದ್ಯಾಲಯದ ಸೇವೆಗೆ ಸೇರಿದ ದಿನಾಂಕಕ್ಕೆ ಸಂಬಂಧಿಸಿದಂತೆ ದಾಖಲೆ (30 kb) ಹಾಗೂ ಆಧಾರ್ ಕಾರ್ಡ್ (20 kb) ಮತ್ತು ಇ-ಮೇಲ್ ಐಡಿ** ಗಳೊಂದಿಗೆ ಆನ್ ಲೈನ್ ಮುಖಾಂತರ **Upload** ಮಾಡಿ ರಿಜಿಸ್ಟ್ರೇಶನ್" ಮಾಡಿಸಿ ತಮಗೆ ಬೇಕಾದ (Slot Booking) ದಿನಾಂಕ ಹಾಗೂ ಸ್ಥಳವನ್ನು ನಿಗಧಿಪಡಿಸಿಕೊಂಡು ಪರೀಕ್ಷೆಗೆ ಹಾಜರಾಗಬಹುದಾಗಿದೆ.
2. ಸರ್ಕಾರದ ಆದೇಶದಂತೆ ಒಂದು ಪರೀಕ್ಷೆಗೆ ವೆಚ್ಚ ರೂ 359/- (ಜಿ.ಎಸ್.ಟಿ ಸಹಿತ) ರಂತೆ ಮತ್ತು ಒಂದು ಡಿಜಿಟಲ್ ಪ್ರಮಾಣ ಪತ್ರಕ್ಕೆ ರೂ. 9/- (ಜಿ.ಎಸ್.ಟಿ ಸಹಿತ) ಒಬ್ಬ ಸಿಬ್ಬಂದಿಗೆ ಒಟ್ಟು 359+9= 368 + ಬ್ಯಾಂಕ್ ಚಾರ್ಜಸ್ "ಆನ್ ಲೈನ್ ಮುಖಾಂತರ ಅಧಿಕಾರಿ / ಸಿಬ್ಬಂದಿಗಳು ಪಾವತಿ ಮಾಡಬೇಕು.
3. ಅಧಿಕಾರಿಗಳು/ಸಿಬ್ಬಂದಿಗಳು ಮೊದಲ ಪ್ರಯತ್ನದಲ್ಲಿ ಉತ್ತೀರ್ಣರಾಗದೆ ಇದ್ದಲ್ಲಿ ಮತ್ತೆ ಪರೀಕ್ಷೆ ಬರೆಯಬಹುದು. ಆದರೆ, ಅಧಿಕಾರಿಗಳು/ಸಿಬ್ಬಂದಿಗಳು ತಮ್ಮ ಸ್ವಂತ ಖರ್ಚಿನಲ್ಲಿಯೇ ಪ್ರತಿ ಪ್ರಯತ್ನಕ್ಕೆ (Attempts) ರೂ 359.00+ ಬ್ಯಾಂಕ್ ಚಾರ್ಜಸ್ ನ್ನು "ಆನ್ ಲೈನ್" ಮೂಲಕ ಪಾವತಿಸಿ ಪರೀಕ್ಷೆ ಪಡೆಯಬೇಕಾಗುವುದು.
4. ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ: 9553748521 ಇ-ಮೇಲ್ ವಿಳಾಸ clt@karanataka.gov.in ಗೆ ಸಂಪರ್ಕಿಸಬಹುದಾಗಿದೆ.

ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಗೆ ಹಾಜರಾಗುವ ಬೆಂಗಳೂರು ವಿಶ್ವವಿದ್ಯಾಲಯದ ಎಲ್ಲಾ ಅಧಿಕಾರಿಗಳು/ಸಿಬ್ಬಂದಿಗಳು ಪರೀಕ್ಷೆಗೆ ಹಾಜರಾದ ಬಗ್ಗೆ ಬೇಕಾದ ದಾಖಲೆಯನ್ನು ಸಲ್ಲಿಸಿದ್ದಲ್ಲಿ ಕರ್ತವ್ಯದ ಮೇಲಿರುವರೆಂದು **(OOD)** ಪರಿಗಣಿಸಲಾಗುವುದು.

ಅದರಂತೆ, ಬೆಂಗಳೂರು ವಿಶ್ವವಿದ್ಯಾಲಯದ ಎಲ್ಲಾ ಅಧಿಕಾರಿಗಳು/ಸಿಬ್ಬಂದಿಗಳು ಕಡ್ಡಾಯವಾಗಿ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ದಿನಾಂಕ: 31.12.2022 ರೊಳಗೆ ಉತ್ತೀರ್ಣರಾಗಿ ಕಿಯಾನಿಕ್ಸ್ ಸಂಸ್ಥೆಯ ಡಿಜಿಟಲ್ ಪ್ರಮಾಣ ಪತ್ರವನ್ನು ನೀಡುವಂತೆ ಸೂಚಿಸಲಾಗಿದೆ.

ಕುಲಸಚಿವರು 5/12/—

**ಪ್ರತಿಗಳು:**

1. ಕುಲಸಚಿವರು (ಮೌಲ್ಯಮಾಪನ), ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-56.
2. ವಿತ್ತಾಧಿಕಾರಿಯವರು, ಹಣಕಾಸು ವಿಭಾಗ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
3. ಕುಲಪತಿ/ ಕುಲಸಚಿವರು/ ಕುಲಸಚಿವರು (ಮೌ)/ವಿತ್ತಾಧಿಕಾರಿಯವರ ಆಪ್ತಕಾರ್ಯದರ್ಶಿಯವರಿಗೆ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

5. ಕಛೇರಿ ಪ್ರತಿ.

} ತಮ್ಮ ಕಛೇರಿ / ವಿಭಾಗದ ಶಿಕ್ಷಕೇತರ ಸಿಬ್ಬಂದಿಗಳ ಗಮನಕ್ಕೆ ತರಲು ಕೋರಲಾಗಿದೆ.